

## ಕೋರಸ್ ಯಾರದು ಬಲ್ಲಿರಾ?

‘ಅನ್ಯಾಯಕಾರಿ ಬ್ರಹ್ಮ’ ಗೀತೆಯಲ್ಲಿ ಮಹದೇವ ಸ್ವಾಮಿ ಅವರಂತೆಯೇ ಕೋರಸ್ ಧ್ವನಿಯೂ ಗಮನಸೆಳೆಯುತ್ತದೆ. ಕೋರಸ್ ನೀಡುವವರಿಗೆ ಜಾನಪದದಲ್ಲಿ ‘ಸೊಲ್ಲು ಹೇಳುವವರು’ ಎಂದು ಕರೆಯುತ್ತಾರೆ. ಮಹದೇವಸ್ವಾಮಿ ಅವರ ಜೊತೆಗೂಡಿ ಹಾಡಿದವರ, ಕಂಸಾಳೆ, ತಾಳ, ದಮ್ಮಡಿ, ಘಟ ನುಡಿಸಿದವರನ್ನು ಹುಡುಕಿದಾಗ ಐದು ಹೆಸರುಗಳು ಎದುರಾಗುತ್ತವೆ. ಅವರಲ್ಲೊಬ್ಬರು ಮಳವಳ್ಳಿ ಶಿವಪ್ಪ.

ಮಹದೇವಸ್ವಾಮಿ ಅವರಿಗೆ ಶಿವಪ್ಪ ಶಕ್ತಿಯಾಗಿದ್ದರು, ಅವರೇ ಕಥೆಗಳಿಗೆ ಮೇಲು ಗಾಯಕರಾಗಿ ಹಾಡುತ್ತಿದ್ದರು. ಕಂಚಿನ ಕಂಠದಂತಿದ್ದ ಶಿವಪ್ಪ ಅವರ ಧ್ವನಿ ಮಹದೇವಸ್ವಾಮಿ ಅವರ ಗಾಯನಕ್ಕೆ ಹೊಸ ರೂಪ ಕೊಡುತ್ತಿತ್ತು. ಅವರ ಬಹುತೇಕ ಕ್ಯಾಸೆಟ್‌ಗಳಿಗೆ, ಸಿ.ಡಿ.ಗಳಿಗೆ, ವಿಡಿಯೊ ಗೀತೆಗಳಿಗೆ ಮಳವಳ್ಳಿ ಶಿವಪ್ಪ ಶಕ್ತಿಯಾಗಿದ್ದರು. ಶಿವಪ್ಪ ಮೃತಪಟ್ಟು ನಾಲ್ಕು ವರ್ಷಗಳಾಗಿವೆ.

ಕೊಳತ್ತೂರು ನಂಜುಂಡಸ್ವಾಮಿ (ನಂಜುಂಡ) ಮಹದೇವಸ್ವಾಮಿ ಅವರಿಗೆ ತಾಳ ಹಾಗೂ ದಮ್ಮಡಿ ನುಡಿಸಿದ್ದಾರೆ. ಹಾಡಿನ ನಡುವೆ ಬರುತ್ತಿದ್ದ ಉಪಕಥೆಗಳಿಗೆ ‘ಹೂಂ’ಕರಿಸುತ್ತಿದ್ದ ನಂಜುಂಡಸ್ವಾಮಿ ನಗೆಯ ಬುಗ್ಗೆ ಹುಟ್ಟಿಸುತ್ತಿದ್ದರು. ಅವರು, ಬೆಂಕಿಗೆ ದಮ್ಮಡಿ ಕಾಯಿಸಿ ನುಡಿಸುತ್ತಿದ್ದರೆ ತಣತಣ ಎನ್ನುತ್ತಿತ್ತು ಎಂಬ ನೆನಪುಗಳು ಹಿರಿಯ ಕಲಾವಿದರಲ್ಲಿವೆ.

‘ಮಹದೇವಸ್ವಾಮಿ ಅವರ ಜೊತೆಗೆ ನನ್ನ

## ‘ಹ್ಯಾರಿಪಾಟರ್’ ಮೀರಿಸುವ ‘ಚೆನ್ನಿಗರಾಮ’

ಮಹದೇವಸ್ವಾಮಿ ಅವರ ಮನಮೋಹಕ ಧ್ವನಿಗೆ ಎಂದೋ ದೊಡ್ಡ ಗೌರವ ಸಿಗಬೇಕಾಗಿತ್ತು. ಕಡೆಗೆ ‘ಅರ್ಜುನನ ಹಾಡು’ ಗೀತೆಯ ಮೂಲಕವಾದರೂ ಅವರಿಗೆ ಗೌರವ ಸಿಗುತ್ತಿರುವುದು ಸಂತಸದ ವಿಚಾರ.

ಹಲವು ಅಪರೂಪದ ಜಾನಪದ ಕತೆಗಳು ಮಹದೇವಣ್ಣ ಅವರ ಮನದಾಳದಲ್ಲಿವೆ. ಅವರು ಎಲ್ಲೂ ಹಾಡದ, ಹೇಳದ ಅಪರೂಪದ ಕಥೆಯೊಂದು ಅವರೊಬ್ಬರ ಬಳಿ ಮಾತ್ರವೇ ಇದೆ, ಅದು ‘ಚೆನ್ನಿಗರಾಮನ ಕಥೆ’. ಇಡೀ ರಾಜ್ಯದಲ್ಲಿ ‘ಚೆನ್ನಿಗರಾಮನ ಕಥೆ’ಯನ್ನು ಮಹದೇವಣ್ಣನವರು ಮಾತ್ರ ಹೇಳಬಲ್ಲರು. ಚಾಮರಾಜನಗರದ ದೊಡ್ಡಗವಿ ಬಸಪ್ಪ ಅವರಿಗೆ ಈ ಕಥೆ ತಿಳಿದಿದೆ. ಆದರೆ ವಯಸ್ಸಿನ ಕಾರಣಕ್ಕೆ ಅವರು ಹಾಡುವ ಸ್ಥಿತಿಯಲ್ಲಿ ಇಲ್ಲ. ಈಗ ಸದ್ಯಕ್ಕೆ ಮಹದೇವಸ್ವಾಮಿ ಅವರು ಮಾತ್ರ ಚೆನ್ನಿಗರಾಮನ ಕಥೆ ಹೇಳಬಲ್ಲರು.



ಸಮಸ್ಯೆ ಏನೆಂದರೆ, ಈ ಕಥೆಗೆ ‘ಸೊಲ್ಲು’ (ಕೋರಸ್) ಹೇಳುವವರು ಯಾರೂ ಇಲ್ಲ. ಇದಕ್ಕೆ ಸೊಲ್ಲು ಹೇಳುವವರ ಹಿಮ್ಮೇಳ ಅತ್ಯಂತ ಪ್ರಮುಖವಾದುದು, ಅವರಿಗೂ ಕಥೆ ತಿಳಿದಿರಬೇಕು. ಈ ಕಥೆ ತಿಳಿದ ಬೇರೆ ಕಲಾವಿದರು ಇಲ್ಲದ ಕಾರಣ ಮಹದೇವಣ್ಣನವರು ಇನ್ನೂ ಅದನ್ನು ಎಲ್ಲೂ ಹಾಡಲು ಸಾಧ್ಯವಾಗಿಲ್ಲ. ಅವರು ಮನಸ್ಸು ಮಾಡಿ ಯಾರನ್ನಾದರೂ ತಯಾರು ಮಾಡಿ ಸೊಲ್ಲು ಹೇಳಿಸಿದರೆ, ಕನ್ನಡ ಜಾನಪದ ಲೋಕದಲ್ಲಿ ಚೆನ್ನಿಗರಾಮ ದಾಖಲೆಯನ್ನೇ ಸೃಷ್ಟಿಸುತ್ತಾನೆ.

ಚೆನ್ನಿಗರಾಮನ ಕಥೆ ‘ಹ್ಯಾರಿಪಾಟರ್’ ಮೀರಿಸುವಂತಹ ಸಾಹಸಮಯ ಕಥಾಹಂದರ ಹೊಂದಿದೆ. ರಾಜನೊಬ್ಬನಿಗೆ ಮಕ್ಕಳಿಲ್ಲ, ಮಡದಿಗೆ ಋಷಿಯೊಬ್ಬರು ಮಾವಿನಹಣ್ಣು ತಿನ್ನಲು ಕೊಡುತ್ತಾರೆ. ರಾಣಿಯು ಹಣ್ಣು ತಿಂದು ಸಿಪ್ಪೆ–ವಾಟೆಯನ್ನು ಎಸೆಯುತ್ತಾಳೆ. ಹಣ್ಣು ತಿಂದ ರಾಣಿಗೆ ಚೆನ್ನಿಗರಾಮ ಹುಟ್ಟುತ್ತಾನೆ. ಎಸೆದ ಸಿಪ್ಪೆ ತಿಂದ ಸೇವಕಿಗೆ ಅಪ್ಪಣ್ಣ ಹುಟ್ಟುತ್ತಾನೆ, ವಾಟೆ ತಿಂದ ಕತ್ತೆಯೊಂದು ಕುದುರೆಗೆ ಜನ್ಮ ನೀಡುತ್ತದೆ. ಈ ಮೂವರೂ ಸೇರಿ ರಾಕ್ಷಸನೊಬ್ಬನನ್ನು ಸಂಹಾರ ಮಾಡುತ್ತಾರೆ.

ಇಂತಹ ಸಾಹಸದ ಹಿನ್ನೆಲೆಯುಳ್ಳ ಜನಪದ ಕಾವ್ಯವನ್ನು ಮಹದೇವಣ್ಣ ಮಾತ್ರ ಪ್ರಸ್ತುತಪಡಿಸಬಲ್ಲರು.

**–ಶಿವಾರ ಉಮೇಶ್,** ಜನಪದ ಗಾಯಕ, ಮಂಡ್ಯ